- ತಾಯಿ ಮಕ್ಕಳ ಆರೋಗ್ಯ ಮತ್ತು ಶಾಲಾ ಮಕ್ಕಳ ಆರೋಗ್ಯ ತಪಾಸಣೆಯ ಮೇಲ್ವಿಚಾರಣೆ.
- ಸಾಂಸರ್ಗಿಕ ರೋಗಗಳ ನಿಯಂತ್ರಣ ಕಾರ್ಯಕ್ರಮ ಹಾಗೂ ಮೇಲ್ವಿಚಾರಣೆ.
- ಆಹಾರ ಪರೀಕ್ಷೆ ಹಾಗೂ ಬಾಲ ಕಾರ್ಮಿಕರ ಕಲ್ಯಾಣ ಕಾರ್ಯಕ್ರಮಗಳು.
- ವೈದ್ಯಕೀಯ ಗರ್ಭಪಾತ ಹಾಗೂ ಕುಟುಂಬ ಕಲ್ಯಾಣ ಮತ್ತು ಮಾನಸಿಕ ಆರೋಗ್ಯ ಕಾರ್ಯಕ್ರಮಗಳ ಮೇಲ್ವಿಚಾರಣೆ.
- ಭ್ರೂಣಲಿಂಗಪತ್ತೆ ತಡೆ ಕಾರ್ಯಕ್ರಮಗಳು.
- ಎ ಮತ್ತು ಬಿ ದರ್ಜೆ ಅಧಿಕಾರಿಗಳ ಸೇವಾ ವಿವರಗಳು ಮತ್ತು ಶಿಸ್ತು ಕ್ರಮಗಳ ಬಗ್ಗೆ.
- ಸಿ ಮತ್ತು ಡಿ ದರ್ಜೆ ನೌಕರರ ಸೇವಾ ವಿವರಗಳು ಮತ್ತು ಶಿಸ್ತು ಕ್ರಮಗಳ ಬಗ್ಗೆ.
- ಟೆಂಡರ್ ಆಹ್ವಾನ ಮತ್ತು ಪಿಠೋಪಕರಣಗಳ ಹರಾಜು ಬಗ್ಗೆ ಕ್ರಮ ಕೈಗೊಳ್ಳುವುದು.

**:: ಪ್ರಕಟಣೆ ::**

ಕರ್ನಾಟಕ ಮಾಹಿತಿ ಹಕ್ಕು ಅಧಿನಿಯಮ 2005 ರ ನಿಯಮ 4(1) (ಬಿ) ರೀತ್ಯಾ 2017 ನೇ ಸಾಲಿನಲ್ಲಿ ಪ್ರಕಟಿಸಲಾಗಿರುವ ವಿವರಗಳು.

**ಜಿಲ್ಲಾ ಆರೋಗ್ಯ ಮತ್ತು ಕು. ಕ. ಕಚೇರಿಯ ಸಂಘಟನೆ,ಪ್ರಾಕಾರ್ಯಗಳು ಹಾಗೂ ಕರ್ತವ್ಯಗಳ ವಿವರಗಳು.**

ವೈದ್ಯಕೀಯ ಇಲಾಖೆ ಮತ್ತು ಜನಾರೋಗ್ಯ ಇಲಾಖೆಗಳು ಹಿಂದೆ ಅಸ್ತಿತ್ವದಲ್ಲಿದ್ದು, 1960 ನೇ ಸಾಲಿನಲ್ಲಿ ವೃಂದ ಮತ್ತು ನೇಮಕಾತಿ ನಿಯಮ ಜಾರಿಗೆ ಬಂದವು. 1965 ನೇ ಸಾಲಿನವರೆಗೂ ವೈದ್ಯಕೀಯ ಮತ್ತು ಜನಾರೋಗ್ಯಗಳು ಪ್ರತ್ಯೇಕವಾಗಿ ಬೇರೆ ಬೇರೆ ಇಲಾಖೆಗಳಾಗಿಯೇ ಇದ್ದವು. 1965 ನೇ ಸಾಲಿನಲ್ಲಿ ಸರ್ಕಾರದ ಆದೇಶ ಸಂಖ್ಯೆ:ಸಿಎಲ್ಎಂ9: ಎಂಇಜಿ: ದಿನಾಂಕ:17-06-1968 ರಲ್ಲಿ ಈ ಎರಡು ಇಲಾಖೆಗಳನ್ನು ವಿಲೀನಗೊಳಿಸಿದೆ. ವೈದ್ಯಕೀಯ ಶಿಕ್ಷಣ, ಔಷಧ ನಿಯಂತ್ರಣ ಇಲಾಖೆಯ ಭಾರತೀಯ ವೈದ್ಯ ಪದ್ದತಿ ಹಾಗೂ ಕಾರ್ಮಿಕ ರಾಜ್ಯ ವಿಮಾ ಯೋಜನೆ ( ವೈದ್ಯಕೀಯ) ಸೇವೆಗಳು ಸಹ ಒಳಗೊಂಡಂತೆ ಇಲಾಖೆಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಯೋಜನೆ ಇಲಾಖೆ ಎಂದು ಹೆಸರಿಸಲಾಗಿದೆ. ಕಾಲಕ್ರಮೇಣ ಇಲಾಖೆ ಬೃಹದಾಕಾರವಾಗಿ ಬೆಳೆದಿದ್ದರಿಂದ ವೈದ್ಯಕೀಯ ಶಿಕ್ಷಣ, ಔಷಧ ನಿಯಂತ್ರಣ ಇಲಾಖೆ, ಭಾರತೀಯ ವೈದ್ಯ ಪದ್ದತಿ ಹಾಗೂ ಕಾರ್ಮಿಕ ರಾಜ್ಯ ವಿಮಾ ಯೋಜನೆ, ವೈದ್ಯಕೀಯ ಸೇವೆಗಳು ಬೇರೆ ಬೇರೆಯಾಗಿ ಹೋಗಿದೆ. ಉಳಿದಂತೆ ಗಾತ್ರ ದೊಡ್ಡದಾಗುತ್ತ ಬೆಳೆದಿದೆ.

1) ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಮಂಡ್ಯ ರವರ ಹಾಗೂ ಅವರ ಅಧೀನ ಸಿಬ್ಬಂದಿಗೆ ಸಂಬಂಧಿಸಿದ ಸೇವಾ ವಿವರಗಳು, ಶಿಸ್ತು ಕ್ರಮ, ವರ್ಗಾವಣೆ ಇತ್ಯಾದಿ, ನಿರ್ದೇಶಕರು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು ಇವರ ವ್ಯಾಪ್ತಿಗೆ ಒಳಪಡುತ್ತದೆ.

(2) ಈ ಕೆಳಕಾಣಿಸಿರುವ ಸಂಸ್ಥೆಗಳು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ, ಮಂಡ್ಯ ರವರ ಕಚೇರಿ ವ್ಯಾಪ್ತಿಗೆ ಒಳಪಟ್ಟಿರುತ್ತದೆ.

| ಕ್ರಮ ಸಂಖ್ಯೆ | ವಿವರಗಳು | ಸಂಖ್ಯೆ | ಹಾಸಿಗೆಗಳ ಸಂಖ್ಯೆ |
|---|---|---|---|
| 1 | ತಾಲ್ಲೂಕು ಆರೋಗ್ಯಾಧಿಕಾರಿಗಳ ಕಚೇರಿ | 7 | - |
| 2 | ತಾಲ್ಲೂಕು ಮಟ್ಟದ ಆಸ್ಪತ್ರೆಗಳು | 6 | 100 |
| 3 | ಸಮುದಾಯ ಆರೋಗ್ಯ ಕೇಂದ್ರಗಳು | 10 | 30 ಹಾಸಿಗೆ |
| 4 | ಪ್ರಾಥಮಿಕ ಆರೋಗ್ಯ ಕೇಂದ್ರಗಳು | 115 | 6 |
| 5 | ನಗರ ಪ್ರಾಥಮಿಕ ಆರೋಗ್ಯ ಕೇಂದ್ರಗಳು | 2 | - |
| 6 | ಹೆರಿಗೆ ಸೌಲಭ್ಯದ ಆರೋಗ್ಯ ಕೇಂದ್ರಗಳು | 39 | 10 ಹಾಸಿಗೆ |
| 7 | ಉಪಕೇಂದ್ರಗಳು | 407 | - |

3) ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಕಚೇರಿಯ ವ್ಯಾಪ್ತಿಯಲ್ಲಿ ಪ್ರಸ್ತುತ ಈ ಕೆಳಕಾಣಿಸಿರುವಂತೆ ಮಾನವ ಸಂಪನ್ಮೂಲ ಬಲ ಇರುತ್ತದೆ.

ಹಿರಿಯ ಮತ್ತು ಕಿರಿಯ ಪುರುಷ ಮತ್ತು ಮಹಿಳಾ ಆರೋಗ್ಯ ಸಹಾಯಕರು, ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಹಿರಿಯ ಮತ್ತು ಕಿರಿಯ ಅರೇ ವ್ಯದ್ಯಕೀಯ ಕಾರ್ಯಕರ್ತರು ಹೆಚ್ಚಾಗಿ ಫೀಲ್ಡ್‌ವರ್ಕ್ ಮಾಡುತ್ತಾರೆ. ವೈದ್ಯರು, ಶುಶ್ರೂಷಕರು, ಪ್ರಯೋಗ ಶಾಲಾ ತಂತ್ರಜ್ಞರು, ಕ್ಷ- ಕಿರಣ ತಂತ್ರಜ್ಞರು, ಲಿಪಿಕ ಮತ್ತು ಗ್ರೂಪ್- ಡಿ ನೌಕರರು ವಾಹನ ಚಾಲಕರು ಸೇವೆಯಲ್ಲಿದ್ದಾರೆ.

ಇಲಾಖೆಯಲ್ಲಿ ವೈದ್ಯಕೀಯ, ಅರೇ-ವೈದ್ಯಕೀಯ: ತಾಂತ್ರಿಕಾ ಹಾಗೂ ಲಿಪಿಕ, ಅಧಿಕಾರಿ ಸಿಬ್ಬಂದಿಗಳಿದ್ದು, ವಿವಿಧ ವೃಂದಗಳನ್ನು ಒಳಗೊಂಡಿದೆ. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ಒಳಗೊಂಡಂತೆ ------ ಮಂಜೂರು ಹುದ್ದೆಗಳಿದ್ದು,----------- ಮಂದಿ ನೌಕರರು ಕರ್ತವ್ಯ ನಿರ್ವಹಿಸುತ್ತಿದ್ದಾರೆ.

4) ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ಆಡಳಿತಾತ್ಮಕ ಹಾಗೂ ಜಿಲ್ಲಾ ಮಟ್ಟದ ಕಾರ್ಯಕ್ರಮಗಳಿಗೆ ಮುಖ್ಯಸ್ಥರಾಗಿದ್ದಾರೆ. ಇವರ ಅಧೀನದಲ್ಲಿ ಆಡಳಿತಾತ್ಮಕ ಮತ್ತು ಆರ್ಥಿಕ ವಿಷಯಗಳಲ್ಲಿ ಈ ಕೆಳಕಾಣಿಸಿರುವ ಅಧಿಕಾರಿಗಳು ಕಾರ್ಯನಿರ್ವಹಿಸುತ್ತಿದ್ದಾರೆ.

- ಸಹಾಯಕ ಆಡಳಿತಾಧಿಕಾರಿ
- ಕಚೇರಿ ಅಧೀಕ್ಷಕರು (ಆಡಳಿತ ಮತ್ತು ಲೆಕ್ಕಪತ್ರ)

5) ಜಿಲ್ಲಾ ಮಟ್ಟದ ವಿವಿಧ ಕಾರ್ಯಕ್ರಮ ಅಧಿಕಾರಿಗಳು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಮಂಡ್ಯರವರ ಅಧೀನದಲ್ಲಿ.

- ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ಅಧಿಕಾರಿ.
- ಜಿಲ್ಲಾ ಆರ್.ಸಿ.ಹೆಚ್. ಅಧಿಕಾರಿ.
- ಜಿಲ್ಲಾ ಕಣ್ಗಾವಲು ಅಧಿಕಾರಿ.
- ಜಿಲ್ಲಾ ಕ್ಷಯರೋಗ ನಿಯಂತ್ರಣಾಧಿಕಾರಿ.
- ಜಿಲ್ಲಾ ಕುಷ್ಠರೋಗ ನಿಯಂತ್ರಣಾಧಿಕಾರಿ.
- ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ.
- ಜಿಲ್ಲಾ ಶುಶ್ರೂಷಣಾಧಿಕಾರಿ.
- ಜಿಲ್ಲಾ ಕುಟುಂಬ ಕಲ್ಯಾಣಾಧಿಕಾರಿ.

6) ತಾಲ್ಲೂಕು ಮಟ್ಟದ ಆಡಳಿತ ಹಾಗೂ ವಿವಿಧ ಕಾರ್ಯಕ್ರಮಗಳ ಅಧಿಕಾರಿಗಳು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಮಂಡ್ಯ ರವರ ಅಧೀನದಲ್ಲಿ
1) ಎಲ್ಲಾ ತಾಲ್ಲೂಕು ಆರೋಗ್ಯಾಧಿಕಾರಿಗಳು.
1) ಎಲ್ಲಾ ವೈದ್ಯಾಧಿಕಾರಿಗಳು, ಅರೇ-ವೈದ್ಯಕೀಯ ತಾಂತ್ರಿಕ : ಲಿಪಿಕ ಗ್ರೂಪ್ ಡಿ ಇತ್ಯಾಧಿ ನೌಕರರು ಇರುತ್ತಾರೆ.

**7) ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು:-**

ಇವರ ಅಧೀನದಲ್ಲಿ ಸಮೂಹ ಎ.ಬಿ.ಸಿ. ಮತ್ತು ಡಿ ವೃಂದಗಳ ಅಧಿಕಾರಿ:ನೌಕರರು ಈ ಕೆಳಕಾಣಿಸಿರುವ ಆಡಳಿತಾತ್ಮಕ ಮತ್ತು ಸೇವಾ ವಿಷಯಗಳನ್ನು ನಿರ್ವಹಿಸುತ್ತಿದ್ದಾರೆ.
ಟಪಾಲು ಸ್ವೀಕೃತಿ ಮತ್ತು ರವಾನೆ.

**7) (1) ಸಿಬ್ಬಂದಿ (1) ವಿಭಾಗ** :- ಗುಂಪು ಎ ಮತ್ತು ಬಿ ಗೆ ಸಂಬಂಧಿಸಿದಂತೆ,

1. ವಾರ್ಷಿಕಾ ಸಾಧನೆ ವಿವರಗಳು
2. ಪದೋನ್ನತಿ.
3. ವಾರ್ಷಿಕ ಬಡ್ತಿ
4. ನಿಯೋಜನೆ
5. ಆಸ್ತಿ ಮತ್ತು ಋಣಭಾರ
6. ರಜಾ ಮಂಜೂರಾತಿ
7. ರಹಸ್ಯ ವರದಿ
8. ಸಾರ್ವಜನಿಕ ದೂರು
9. ಆಡಳಿತ ತರಬೇತಿ ನಿವೃತ್ತಿ ವರ್ಗಾವಣೆ ಪ್ರಕರಣಗಳನ್ನು ನಿರ್ವಹಿಸುತ್ತಾರೆ.

7) (2) **ಸಿಬ್ಬಂದಿ - (2), (3) ಮತ್ತು (4)ವಿಭಾಗಗಳು:-**

ಗುಂಪು ಸಿ ಮತ್ತು ಡಿ ಗೆ ಸಂಬಂಧಿಸಿದಂತೆ,

1. ಸೇವಾಚಿಂತನ
2. ವಾರ್ಷಿಕಾ ಸಾಧನೆ ವಿವರಗಳು
3. ಪದೋನ್ನತಿ.
4. ವಾರ್ಷಿಕ ಬಡ್ತಿ
5. ನಿಯೋಜನೆ
6. ಆಸ್ತಿ ಮತ್ತು ಋಣಭಾರ
7. ರಜಾ ಮಂಜೂರಾತಿ
8. ರಹಸ್ಯ ವರದಿ
9. ಸಾರ್ವಜನಿಕ ದೂರು
10. ವರ್ಗಾವಣೆ
11. ಆಡಳಿತ ತರಬೇತಿ
12. ನಿವೃತ್ತಿ
13. ಮಾನವ ಸಂಪನ್ಮೂಲ ದತ್ತಾಂಶ ವರದಿಗಳು.
14. ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡ:ಅಂಗವಿಕಲ ದೃಷ್ಟಿ ಮಾಂದ್ಯ ಪ್ರಕರಣ ವರದಿ.

7) (3) **<u>ಕಟ್ಟಡ ವಿಭಾಗ</u>**:- ಆರೋಗ್ಯ ಇಲಾಖೆಗೆ ಸಂಬಂಧಿಸಿದ ಕಟ್ಟಡಗಳ ನಿರ್ಮಾಣ, ದುರಸ್ತಿ, ನೀರಿನ ಸೌಲಭ್ಯ ಹಾಗೂ ವಿದ್ಯುತ್‌ಚ್ಛಕ್ತಿ ದುರಸ್ಥಿ ಮತ್ತು ಪ್ರಧಾನ ಮಂತ್ರಿ ರೋಜಗಾರ್ ಯೋಜನೆ.

7(4) <u>ಅಭಿವೃದ್ಧಿ ವಿಭಾಗ</u>:- ಹೊಸ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಮಂಜೂರಾತಿ, ಹೆರಿಗೆ ಆಸ್ಪತ್ರೆ ಮಂಜೂರಾತಿ, ಸಿಬ್ಬಂದಿ ಮಂಜೂರಾತಿ, ಆಸ್ಪತ್ರೆಗಳ ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಹಾಗೂ ಆರೋಗ್ಯ ರಕ್ಷಾಸಮಿತಿ ಮುಂತಾದ ಕೆಲಸ ನಿರ್ವಹಿಸುತ್ತದೆ.

7(5) **<u>ಶಿಸ್ತು ಕ್ರಮ ಮತ್ತು ದಂಡನೆ:-</u>**

ಅಧಿಕಾರ ದುರುಪಯೋಗ, ಅನುಚಿತ ವರ್ತನೆ, ಲಂಚ ಪ್ರಕರಣಗಳು, ಕ್ರಿಮಿನಲ್ ಪ್ರಕರಣಗಳು, ಅವ್ಯವಹಾರ ಅನಧಿಕೃತ ಗೈರು ಹಾಜರಿ ಇತ್ಯಾಧಿ ಪ್ರಕರಣಗಳ ಶಿಸ್ತು ಕ್ರಮಕ್ಕೆ ಸಂಬಂಧಪಟ್ಟಂತೆ ನಿರ್ದೇಶಕರು ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಮಂಡ್ಯರವರು ಪ್ರಕರಣಗಳ ಬಗ್ಗೆ ನಿರ್ಣಯವನ್ನು ಕೈಗೊಳ್ಳುತ್ತಾರೆ.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಚೇರಿಯಲ್ಲಿ ಡಿಪಿಎನ್ ವಿಭಾಗ ಇದ್ದು, ವಿಚಾರಣೆ ಪೂರ್ಣಗೊಂಡ ನಂತರ ಅಂತಿಮ ವರದಿ ಮತ್ತು ಅಭಿಪ್ರಾಯ ಶಿಫಾರಸ್ಸುಗಳೊಂದಿಗೆ ಅಂತಿಮನಿರ್ಣಯಕ್ಕಾಗಿ ಕಡತವನ್ನು ನಿರ್ದೇಶಕರು ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಮಂಡ್ಯಕ್ಕೆ ಹಾಗೂ ಸರ್ಕಾರದ ಮುಖ್ಯಸ್ಥರಿಗೆ ಸಲ್ಲಿಸಲಾಗುತ್ತದೆ.

7(6) **<u>ಸಾದಿಲ್ವಾರು ಬಿಲ್ಲು ವಿಭಾಗ:-</u>**

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಕಚೇರಿಯ ಅಧೀನದಲ್ಲಿ ಬರುವ ಆಸ್ಪತ್ರೆಗಳಿಗೆ ವಿದ್ಯುತ್ ಬಿಲ್ಲು ಟೆಲಿಫೋನ್ ಬಿಲ್ಲು ಆಸ್ಪತ್ರೆ ಉಪಯೋಗಕ್ಕಾಗಿ ಬೇಕಾಗುವ ಸಾಧನ-ಸಾಮಗ್ರಿಗಳು ಕಚೇರಿಗಾಗಿ ಲೇಖನ ಸಾಮಗ್ರಿಗಳು ಕಚೇರಿಗಾಗಿ ಲೇಖನ ಸಾಮಾಗ್ರಿ ಗಳಿಗೆ ಬಿಲ್ಲುಗಳಿಗೆ ಈ ಕಚೇರಿ ಪ್ರವಾಸದ ಬಿಲ್ಲುಗಳ ಮೇಲು ಸಹಿ ಮಾಡಿ ಮಂಜೂರು ಮಾಡಲಾಗುತ್ತದೆ.

7(7) **<u>ನಗದು ವಿಭಾಗ ನಗದು ವಹಿ ನಿರ್ವಹಣೆ:-</u>**

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಚೇರಿ ಸಿಬ್ಬಂದಿ ವೇತನ, ವಾಹನಗಳಿಗೆ ಇಂಧನ, ಖಾಸಗಿ ವೈದ್ಯಕೀಯ ಕಾಲೇಜು ಮತ್ತು ನರ್ಸಿಂಗ್ ಕಾಲೇಜುಗಳ ಹಣ ಸ್ವೀಕೃತಿ ಅನುಮತಿ, ಈ

ಕಚೇರಿಯ ಡಿ.ಸಿ.ಬಿಲ್ಲು: ಪಲ್ಸ್ ಪೋಲಿಯೋ ಕಾರ್ಯಕ್ರಮ ಮತ್ತು ಇತರೇ ಕಾರ್ಯಕ್ರಮದ ವೆಚ್ಚದ ನಿರ್ವಹಣೆ ಖರೀದಿ ಬಾಬ್ತಿಗೆ ಸಂಬಂಧಿಸಿದ ಚೆಕ್ ವಿತರಣೆ.

**7)(8) <u>ಬಡ್ಜೆಟ್ ವಿಭಾಗ:-</u>**

ಈ ವಿಭಾಗದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ, ಮಂಡ್ಯರವರ ಅಧೀನದಲ್ಲಿ ಬರುವ ಎಲ್ಲಾ ಅಧಿಕಾರಿ ಹಾಗೂ ಸಿಬ್ಬಂದಿಗಳ ಹಾಗೂ ಇತರ ಭತ್ಯೆ ವೇತನ ಆರೋಗ್ಯ ಸಂಸ್ಥೆಗಳ ನಿರ್ವಹಣೆಗಾಗಿ ಅನುದಾನ ಅಂದಾಜು ಮಾಡುವುದು ಮತ್ತು ಬಿಡುಗಡೆಯಾದ ಅನುದಾನ ಹಂಚಿಕೆ ಮಾಡುವುದು ಎಲ್ಲಾ ಆರೋಗ್ಯ ಸಂಸ್ಥೆಗಳ ವೆಚ್ಚದ ವಿವರ ಸಲ್ಲಿಸುವುದು. ಬಿಡುಗಡೆಯಾದ ವೇತನ ವೇತನೇತರ ಅನುದಾನ ಪ್ರಸ್ತಾವನೆ ಸಲ್ಲಿಸುವುದು ಮತ್ತು ಅನುದಾನ ಹಂಚಿಕೆ ಮಾಡುವುದು ನಿಯಂತ್ರಿಸುವುದು.

**7(9) <u>ಆಡಿಟ್ ವಿಭಾಗ:-</u>**

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ, ಮಂಡ್ಯರವರ ಅಧೀನದಲ್ಲಿ ಬರುವ ಆಸ್ಪತ್ರೆಗಳ ವಾರ್ಷಿಕ ಲೆಕ್ಕ ತಪಾಸಣೆ ಮಾಡುತ್ತಾರೆ. ತನಿಖಾ ವರದಿಗಳಿಗೆ ಅನುಪಾಲನಾ ವರದಿ ಪಡೆದು ಪರಿಶೀಲಿಸಿ ಆರ್ಥಿಕ ಆಕ್ಷೇಪಣಾರ್ಹ ಪ್ರಕರಣಗಳ ನಿರ್ವಹಣೆ ಮಾಡುತ್ತಾರೆ.

**7(10) <u>ಎನ್.ಡಿ.ಸಿ. ವಿಭಾಗ:-</u>**

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಯವರ ಅಧೀನದಲ್ಲಿ ಬರುವ ಆರೋಗ್ಯ ಸಂಸ್ಥೆಗಳಲ್ಲಿ ಡ್ರಾ ಮಾಡಿದ ಎಲ್ಲಾ ಬಿಲ್ಲುಗಳಿಗೆ ಎನ್.ಡಿ.ಸಿ. ಬಿಲ್ಲು ಮೇಲು ರುಜು ಮಾಡುವುದು ಪರಿಶೀಲಿಸಿ ಮಂಡಿಸುವುದು ಮತ್ತು ಕ್ಲಿಯರೆನ್ಸ್ ಪ್ರಮಾಣ ಪತ್ರ ನೀಡುವುದು ಆಯಾ ವರ್ಷಗಳಲ್ಲಿ ಡ್ರಾ ಮಾಡಿದ ಎ.ಸಿ.ಬಿಲ್ಲು ಮತ್ತು ಅವುಗಳ ಖರ್ಚಿನ ವಿವರಗಳನ್ನು ಕ್ರೂಢೀಕರಿಸಿ ಜಿಲ್ಲಾ ಪಂಚಾಯತ್‌ಗೆ ಸಲ್ಲಿಸುವುದು.

**7(11) <u>ಔಷಧಿ ಉಗ್ರಾಣ ವಿಭಾಗ:-</u>**

ಈ ವಿಭಾಗದಲ್ಲಿ ಜನರಲ್ ಔಷಧಿ ಉಗ್ರಾಣ ಮತ್ತು ಕುಟುಂಬ ಕಲ್ಯಾಣ ಶಸ್ತ್ರ ಚಿಕಿತ್ಸೆಗೆ ಬೇಕಾಗುವ ಔಷಧಿ ಉಗ್ರಾಣ ಇದ್ದು, ಇವುಗಳು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಅಧೀನದಲ್ಲಿ ಬರುವ ಸಂಸ್ಥೆಗಳಿಗೆ ಔಷಧಿ ಸರಬರಾಜು:ಖರೀದಿಸಿದ:ಪೂರೈಕೆಯಾದ ಔಷಧಿಗಳು ಪೀಠೋಪಕರಣಗಳ ನಿರ್ವಹಣೆ ಮಾಡಲಾಗುತ್ತದೆ.

**7)(12) <u>ಆರೋಗ್ಯ ಮೇಲ್ವಿಚಾರಕರ ವಿಭಾಗ:-</u>**

ಈ ವಿಭಾಗದಲ್ಲಿ ಆರೋಗ್ಯ ಮೇಲ್ವಿಚಾರಕರು ಇದ್ದು, ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳ ಸಾಧನೆ ಹಾಗೂ ಸಾಂಕ್ರಾಮಿಕ ರೋಗಗಳ ನಿಯಂತ್ರಣದ ಬಗ್ಗೆ ಕ್ರಮ ಕೈಗೊಂಡು ಕಾರ್ಯ ನಿರ್ವಹಿಸುತ್ತಾರೆ.

8) **<u>ಜಿಲ್ಲಾ ಮಲೇರಿಯ ಅಧಿಕಾರಿಗಳು, ಮಂಡ್ಯ ರವರ ಕಚೇರಿಯ ಕಾರ್ಯಕ್ರಮಗಳು:-</u>**

ಜಿಲ್ಲಾ ಮಲೇರಿಯ ಅಧಿಕಾರಿಗಳು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಇವರು ಜಿಲ್ಲೆಯಲ್ಲಿ ಮಲೇರಿಯಾ ಪ್ರಕರಣಗಳ ಉದ್ಭವವಾಗದಂತೆ ಹಾಗೂ ಎಲ್ಲಿ ಇಂಥ ಪ್ರಕರಣಗಳು ಇರುತ್ತದೋ ಅಲ್ಲಿ ತಡೆಗಟ್ಟುವ ಕೆಲಸ ನಿರ್ವಹಿಸುತ್ತದೆ. ಹಾಗೂ ಗ್ರಾಮಸ್ಥರಲ್ಲಿ ಮಲೇರಿಯಾ ರೋಗ ಹರಡುವ ಬಗ್ಗೆ ಮತ್ತು ತಡೆಗಟ್ಟುವ ಬಗ್ಗೆ ಅರಿವು ಮೂಡಿಸುತ್ತದೆ.

ಸಕ್ರೀಯ ಸ್ಥಾನ ಮಲೇರಿಯಾ ಕ್ಲಿನಿಕ್‌ನಲ್ಲಿ ಮಲೇರಿಯಾ ಜ್ವರ ಸಮೀಕ್ಷೆ ಮಲೇರಿಯ ಪ್ರಕರಣಗಳಿಗೆ ಸಂಬಂಧಿಸಿದಂತೆ ತೀವ್ರ ಚಿಕಿತ್ಸೆ ಮತ್ತು ರಕ್ತಲೇಪನ ಪರೀಕ್ಷೆ, ರೋಗಕಾರಕ ಸೊಳ್ಳೆಗಳ ನಾಶಕ್ಕೆ ರೋಗ

ನಿಯಂತ್ರಣ ಕೀಟನಾಶಕ ಸಿಂಪಡಿಸುವ ಕಾರ್ಯಕ್ರಮ, ಸೊಳ್ಳೆಗಳ ಉತ್ಪತ್ತಿ ಸ್ಥಾನ ನಾಶಮಾಡುವುದು, ಸೊಳ್ಳೆಗಳ ವಾಸದ ನಾಶಕ್ಕಾಗಿ ಗ್ಯಾಂಬೂಸಿಯ ಹಾಗೂ ಗಪ್ಪಿ ಮೀನುಗಳನ್ನು ಕೆರೆ ಕುಂಟೆ ಬಾವಿ ಹಾಗೂ ನೀರಾವರಿ ಬಾವಿಗಳಿಗೆ ಬಿಡುವುದು ಹಾಗೂ ಸ್ವಯಂ ರಕ್ಷಣ ವಿಧಾನಗಳ ತಿಳುವಳಿಕೆಯನ್ನು ಆರೋಗ್ಯ ಶಿಕ್ಷಣದ ಮೂಲಕ ಜನರಿಗೆ ಅರಿವು ಮೂಡಿಸುವುದು ಸಂಬಂಧಪಟ್ಟವರಿಗೆ ವರದಿ ಸಲ್ಲಿಸುವುದು.

9) **ಜಿಲ್ಲಾ ಆರ್.ಸಿ.ಹೆಚ್. ಅಧಿಕಾರಿಗಳು, ಮಂಡ್ಯರವರ ಕಾರ್ಯಕ್ರಮದ ವಿವರಗಳು:-**

ಜಿಲ್ಲಾ ಆರ್.ಸಿ.ಹೆಚ್. ಅಧಿಕಾರಿಗಳು, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಅಧೀನದಲ್ಲಿದ್ದು, ಗರ್ಭಿಣಿ ಮತ್ತು ಮಕ್ಕಳಿಗೆ ಲಸಿಕಾ ಕಾರ್ಯಕ್ರಮ , ಗರ್ಭಿಣಿ ನೊಂದಣಿ ಮತ್ತು ತಪಾಸಣೆ, ಪಿ.ಎಂ.ಎಸ್.ಎಂ.ಎ ಕಾರ್ಯಕ್ರಮ (ಪ್ರತಿ ಮಾಹೆ 9ನೇ ತಾರೀಖು ಗಂಡಾಂತರ ಗರ್ಭಿಣಿಯರ ತಪಾಸಣೆ) ,ರಾಷ್ಟ್ರೀಯ ಬಾಲ ಸ್ವಾಸ್ಥ್ಯ ಕಾರ್ಯಕ್ರಮ ,(ವಿ.ಐ.ಎಫ್.ಎಸ್) ಮಕ್ಕಳಿಗೆ ಹಾಗೂ ಹದಿಹರೆಯದವರಿಗೆ ಕಬ್ಬಿಣಾಂಶ ಮಾತ್ರೆ ವಿತರಣೆ, ರಾಷ್ಟ್ರೀಯ ಜಂತುಹುಳು ನಿಯಂತ್ರಣ ಕಾರ್ಯಕ್ರಮ, ಮಕ್ಕಳ ಅಪೌಷ್ಠಿಕತೆ ತಡೆ ಕಾರ್ಯಕ್ರಮ, ಅತಿಸಾರ ಭೇದಿ ನಿಯಂತ್ರಣ ಕಾರ್ಯಕ್ರಮ, ಹಾಗೂ ಮಕ್ಕಳಿಗೆ ಎ ಅನ್ನಾಂಗ ಪೂರಕ ಕಾರ್ಯಕ್ರಮ ಅರ್ಹ ಫಲಾನುಭವಿಗಳಿಗೆ ಜೆ.ಎಸ್.ವೈ ಅಡಿಯಲ್ಲಿ ಗೌರವಧನ ನೀಡುವುದು. ಗರ್ಭಿಣಿ ಮತ್ತು ಮಕ್ಕಳಿಗೆ ಜೆ.ಎಸ್.ಎಸ್.ಕೆ ಅಡಿಯಲ್ಲಿ ಚಿಕಿತ್ಸೆ ನೀಡುವುದು ಮತ್ತು ಡಿ.ಇ.ಐ.ಸಿ ಕಾರ್ಯಕ್ರಮ್ಮದಡಿಯಲ್ಲಿ ಮಕ್ಕಳಿಗೆ ಉಚಿತ ತಪಾಸಣೆ ಮತ್ತು ಚಿಕಿತ್ಸೆ ಸೌಲಭ್ಯ ನೀಡಲಾಗುತ್ತಿದೆ.

10) **ಜಿಲ್ಲಾ ಕಣ್ಗಾವಲು ಅಧಿಕಾರಿಗಳು ಮಂಡ್ಯರವರ ಕಚೇರಿ ಕಾರ್ಯಕ್ರಮಗಳ ವಿವರ:-**

ಇವರು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ಮಂಡ್ಯರವರ ಅಧೀನದಲ್ಲಿದ್ದು, ಜಿಲ್ಲೆಯಲ್ಲಿ ವರದಿಯಾಗುವ ಸಾಂಕ್ರಾಮಿಕ ರೋಗಗಳ ಬಗ್ಗೆ ಮೇಲ್ವಿಚಾರಣೆ ಮತ್ತು ಅಗತ್ಯ ಮಾರ್ಗದರ್ಶನ ಮಾಡುವುದು. ಸಾಂಕ್ರಾಮಿಕವಲ್ಲದ ರೋಗಗಳ ಬಗ್ಗೆ ಸಹ ಕ್ರಮವಹಿಸುವುದು. ಮುಖ್ಯವಾಗಿ ಕಾಲರ, ಕರಳು ಬೇನೆ, ಹೆಚ್.ಎನ್ ಗಳಂತಹ ಸಾಂಕ್ರಾಮಿಕ ರೋಗಗಳ ಬಗ್ಗೆ ನೇರ ನಿರ್ವಹಣೆ ವಹಿಸಿ ರಾಜ್ಯ ಮಟ್ಟಕ್ಕೆ ವರದಿ ಮಾಡುವುದು ಪ್ರಕರಣಗಳು ವರದಿಯಾಗದಂತೆ ತಡೆಯಲು ಸಭೆಗಳು ಮತ್ತು ಕಾರ್ಯಗಾರಗಳ ಮೂಲಕ ಕ್ರಮವಹಿಸುವುದು ಜಿಲ್ಲಾ ಆರೋಗ್ಯ ಪ್ರಯೋಗ ಶಾಲೆಯಲ್ಲಿ ಕೆಲವು ಮುಖ್ಯ ಖಾಯಿಲೆಗಳ ಪರೀಕ್ಷೆ ನಡೆಸಲ್ಪಡುತ್ತಿದ್ದು, ಕುಡಿಯುವ ನೀರಿನ ಮಾದರಿ ಪರೀಕ್ಷೆ ಮಾಡುತ್ತಿದ್ದು, ಇದರ ಬಗ್ಗೆ ಮೇಲ್ವಿಚಾರಣೆ ಮತ್ತು ಮಾರ್ಗದರ್ಶನ ಮಾಡುವುದು.

ಐ.ಡಿ.ಎಸ್.ಪಿ ಕಾರ್ಯಕ್ರಮ

ಅಧೀನ ಸಂಸ್ಥೆಗಳಿಂದ ಎಸ್.ಪಿ.ಎಲ್ ನಮೂನೆಗಳ ವರದಿಯನ್ನು ಪರಿಶೀಲಿಸುವುದು ಮತ್ತು ಅಗತ್ಯ ಕ್ರಮವಹಿಸುವುದು. ಜಿಲ್ಲೆಯಲ್ಲಿ ವರದಿಯಾಗುವ ಸಾಂಕ್ರಾಮಿಕ ರೋಗಗಳ ಬಗ್ಗೆ ಖುದ್ದು ಬೇಟಿ ನೀಡಿ ಅಗತ್ಯ ಸಲಹೆ ಸೂಚನೆ, ಮಾರ್ಗದರ್ಶನ ನೀಡಿ ಇದರ ಬಗ್ಗೆ ಸಂಬಂದಪಟ್ಟ ಮೇಲಾಧಿಕಾರಿಗಳಿಗೆ ವರದಿ ಮಾಡುವುದು ಮತ್ತು ಇಲಾಖಾ ಸಭೆಗಳಿಗೆ ಹಾಜರಾಗುವುದು.

## 11.ಕುಷ್ಠರೋಗ ನಿರ್ಮೂಲನಾಧಿಕಾರಿಗಳ ಕಛೇರಿ, ಮಂಡ್ಯ ಇಲ್ಲಿನ ಕಾರ್ಯಕ್ರಮಗಳು

### 1. ಕುಷ್ಠರೋಗ ನಿರ್ಮೂಲನಾ ಕಾರ್ಯಕ್ರಮ:

ಜಿಲ್ಲಾ ಕುಷ್ಠರೋಗ ನಿರ್ಮೂಲನಾಧಿಕಾರಿಗಳ ಕಛೇರಿ, ಮಂಡ್ಯ ಇಲ್ಲಿ ಜಿಲ್ಲಾ ಕುಷ್ಠರೋಗ ನಿರ್ಮೂಲನಾಧಿಕಾರಿಗಳು, ಸಿಬ್ಬಂದಿ ವರ್ಗದವರು ಕರ್ತವ್ಯ ನಿರ್ವಹಿಸುತ್ತಿದ್ದು, ಈ ಕಾರ್ಯಕ್ರಮವನ್ನು 2ನೇ ಎನ್.ಎಲ್.ಇ.ಸಿ. ಕಾರ್ಯಕ್ರಮದಲ್ಲಿ ಅನುಷ್ಠಾನಗೊಳಿಸಿ, ಆರೋಗ್ಯ ಇಲಾಖೆಯ ಸಿಬ್ಬಂದಿಗಳಿಗೆ ಕುಷ್ಠರೋಗದ ಬಗ್ಗೆ ತರಬೇತಿ ನೀಡಲಾಗುತ್ತಿದ್ದು, ಗ್ರಾಮಗಳಲ್ಲಿ ವಾಸಿಸುವ ಜನರನ್ನು ಪರೀಕ್ಷಿಸಿ, ಹೊಸ ರೋಗಿಗಳನ್ನು ಪತ್ತೆಹಚ್ಚಿ, ಉಚಿತ ಬಹುಔಷಧಿಯನ್ನು ನೀಡಿ, ಗುಣಮುಕ್ತರನ್ನಾಗಿ ಮಾಡುವುದು. ಗುಣಮುಕ್ತರಾದ ರೋಗಿಗಳಿಗೆ ಉಚಿತ ಎಂ.ಸಿ.ಆರ್. ಚಪ್ಪಲಿಗಳು, ಸ್ವಯಂ ಆರೈಕೆ ಕಿಟ್(ಸೆಲ್ಫ್ ಕೇರ್ ಕಿಟ್), ಅಂಗವಿಕಲತೆ ಇದ್ದಲ್ಲಿ ಉಚಿತ ಸಾಧನ ಸಲಕರಣೆಗಳು, ಅಂಗವಿಕಲತೆಗೆ ಒಳಗಾಗಿರುವ ರೋಗಿಗಳಿಗೆ ಖಅಖ(ಖಜಛಿಂಟಿಣಡಿಣಾಛಿಣುತಜ ಖಣಡಿಂಜಡಿಧಿ)ಗೆ ಕಳುಹಿಸುವುದು. ಆಶಾ ಕಾರ್ಯಕರ್ತೆಯರಿಂದ ಗ್ರಾಮೀಣ ಮಟ್ಟದಲ್ಲಿ ಂಖಗಐಖ

ಕುಷ್ಠರೋಗ ಪತ್ತೆಗೆ ಸಮೀಕ್ಷೆ ನಡೆಸಲಾಗುವುದು ಮತ್ತು ಆರ್.ಬಿ.ಎಸ್.ಕೆ ತಂಡದಿಂದ ಶಾಲಾ ಮಕ್ಕಳ ತಪಾಸಣೆ ನಡೆಸುವುದು, ಅಂಗನವಾಡಿ ಕಾರ್ಯಕರ್ತೆಯರು, ಸ್ವಸಹಾಯ ಸಂಘ, ಚುನಾಯಿತ ಪ್ರತಿನಿಧಿ ಲಕ್ಷಣಗಳನ್ನು ಗುರುತಿಸುವ ಬಗ್ಗೆ, ಉಚಿತ ಚಿಕಿತ್ಸೆ ಲಭ್ಯವಿರುವ ಬಗ್ಗೆ ಹಾಗೂ ನೀಡಲಾಗುತ್ತಿರುವ ಸೌಲಭ್ಯಗಳ ಬಗ್ಗೆ ಅರಿವು ಮೂಡಿಸಲಾಗುತ್ತಿದೆ. ಸಮೂಹ ಮಾಧ್ಯಮ ಚಿತ್ರಗಳು, ರೇಡಿಯೋ ಜಿಂಗಲ್ಸ್, ಗೋಡೆ ಬರಹಗಳು ಹಾಗು ಕರಪತ್ರಗಳ ಮೂಲಕ ಸಾರ್ವಜನಿರಲ್ಲಿ ಅರಿವು ಮೂಡಿಸುವುದು. ಈ ಕಾರ್ಯಕ್ರಮವನ್ನು 10,000/- ಜನಸಂಖ್ಯೆಗೆ ಕಖ(ಕಡಿಜತಚಿಟಜಟಿಛಿಜ ಡಿಚಿಣಜ) ಒಂದಕ್ಕಿಂತ ಕಡಿಮೆ ಮಾಡುವ ಉದ್ದೇಶವನ್ನು ಮುಖ್ಯ ಗುರಿಯನ್ನಾಗಿರಿಸಿ ಸೇವೆ ನೀಡಲಾಗುತ್ತಿದೆ.

## 2. ರಾಷ್ಟ್ರೀಯ ಅಂಧತ್ವ ನಿಯಂತ್ರಣಾ ಕಾರ್ಯಕ್ರಮ:

ಜಿಲ್ಲಾ ಕುಷ್ಠರೋಗ ನಿರ್ಮೂಲನಾಧಿಕಾರಿಗಳ ಕಛೇರಿಯಲ್ಲಿ ಎನ್.ಪಿ.ಸಿ.ಬಿ ಕಾರ್ಯಕ್ರಮದಡಿ ಜಿಲ್ಲಾ ಅಂಧತ್ವ ನಿಯಂತ್ರಣಾಧಿಕಾರಿಗಳು ಹಾಗೂ ಇತರೆ ಸಿಬ್ಬಂದಿಗಳು ಕಾರ್ಯ ನಿರ್ವಹಿಸುತ್ತಿದ್ದು, ನೇತ್ರಾಧಿಕಾರಿಗಳು, ಆರ್.ಬಿ.ಎಸ್.ಕೆ ತಂಡಗಳನ್ನು ಒಳಗೊಂಡಂತೆ ಶಾಲೆಗಳಲ್ಲಿ ಹಾಗೂ ಗ್ರಾಮಗಳಲ್ಲಿ ಉಚಿತ ಕಣ್ಣಿನ ತಪಾಸಣೆ ನಡೆಸುವುದು. ಗುರುತಿಸಲಾದವರಿಗೆ ಸರ್ಕಾರೇತರ ಸಂಸ್ಥೆಗಳಿಂದ ಹಾಗೂ ಸರ್ಕಾರಿ ಆಸ್ಪತ್ರೆಗಳಲ್ಲಿ ಉಚಿತ ಕಣ್ಣಿನ ಪೊರೆ ಶಸ್ತ್ರ ಚಿಕಿತ್ಸೆ ನಡೆಸುವುದು, ದೃಷ್ಟಿದೋಷವಿರುವ ಶಾಲಾ ವಿದ್ಯಾರ್ಥಿಗಳಿಗೆ ಮತ್ತು ಗ್ರಾಮಗಳಲ್ಲಿ ಬಿ.ಪಿ.ಎಲ್. ಕಾರ್ಡ್ ಹೊಂದಿರುವ ವಯಸ್ಕರಿಗೆ ಉಚಿತ ಕನ್ನಡಕಗಳನ್ನು ವಿತರಿಸುವುದು, ಮತ್ತು ಕಣ್ಣಿನ ಇತರೆ ಕಾಯಿಲೆಗಳಿಗೆ ಉಚಿತ ಚಿಕಿತ್ಸೆ ನೀಡುವುದು. ನೇತ್ರಧಾನ ಮಾಡಲು ಸಾರ್ವಜನಿಕರಲ್ಲಿ ಅರಿವು ಮೂಡಿಸುವುದು.

## 3. ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮ ಮಂಡ್ಯ ಇಲ್ಲಿನ ಕಾರ್ಯಕ್ರಮದ ವಿವರ

ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮ ಮಂಡ್ಯ ಇಲ್ಲಿನ ಕಾರ್ಯಕ್ರಮದಡಿಯಲ್ಲಿ ಪ್ರತಿ ಮಂಗಳವಾರ ಮತ್ತು ಶುಕ್ರವಾರ ಮನೋಚೈತನ್ಯ ಕ್ಲಿನಿಕ್ ನಡೆಸಲಾಗುವುದು, ಪ್ರಾ.ಆ.ಕೇಂ/ ಸ.ಆ.ಕೇಂದ್ರಗಳ ಭೇಟಿ ಮತ್ತು ಸಾರ್ವಜನಿಕರಿಗೆ, ವಿದ್ಯಾರ್ಥಿಗಳಿಗೆ ಮಾನಸಿಕ ಆರೋಗ್ಯ ಜಾಗೃತಿ ಕಾರ್ಯಕ್ರಮ ನಡೆಸಲಾಗುವುದು ಹಾಗು ಮಾನಸಿಕ ಆರೋಗ್ಯ ಉಚಿತ ತಪಾಸಣಾ ಶಿಬಿರ ನಡೆಸಲಾಗುವುದು, ಮಂಡ್ಯ ತಾ|| ವ್ಯಾಪ್ತಿಯ ವೈದ್ಯಾಧಿಕಾರಿಗಳಿಗೆ ಔಅಖ ತರಬೇತಿ ನೀಡಲಾಗುವುದು, ಮಾನಸಧಾರ ಭೇಟಿ, ಕಾರಾಗೃಹ ಭೇಟಿ, ವೃದ್ದಾಶ್ರಮ ಭೇಟಿ, ಮನೆ ಭೇಟಿ, ಕ್ಷೇತ್ರ ಭೇಟಿ ಮಾಡಲಾಗುವುದು, ವೈದ್ಯಾಧಿಕಾರಿಗಳಿಗೆ, ಆರೋಗ್ಯ ಸಿಬ್ಬಂದಿಗಳಿಗೆ, ಪ್ರೌಢಶಾಲಾ ಶಿಕ್ಷಕರಿಗೆ, ಆಶಾ ಕಾರ್ಯಕರ್ತೆಯರಿಗೆ,ಪೊಲೀಸ್ ಸಿಬ್ಬಂದಿಗಳಿಗೆ ಹಾಗು ಇತರೆ ಇಲಾಖೆಯ ಸಿಬ್ಬಂದಿಗಳಿಗೆ ಮಾನಸಿಕ ಆರೋಗ್ಯ ತರಬೇತಿ ನೀಡಲಾಗುವುದು ಹಾಗು ಸರ್ಕಾರಿ ರಜೆಗಳನ್ನು ಹೊರತುಪಡಿಸಿ ಕೇಂದ್ರ ಸ್ಥಾನದಲ್ಲಿ (ಆಒಊಕ) ಮಾನಸಿಕ ರೋಗಿಗಳಿಗೆ ಉಚಿತ ಚಿಕಿತ್ಸೆ ಮತ್ತು ಆಪ್ತಸಮಾಲೋಚನೆ ನೀಡಲಾಗುವುದು.

**12) ಸಿ.ಎಂ.ಡಿ. ವಿಭಾಗದಲ್ಲಿನ ಕಾರ್ಯಕ್ರಮಗಳು:-**

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ಹಾಗೂ ಜಿಲ್ಲಾ ಕಣ್ಗಾವಲು ಅಧಿಕಾರಿಗಳ ಅಧೀನದಲ್ಲಿ ಇರುವ ಸಂಸ್ಥೆಗಳಿಂದ ವರದಿಯಾದ ಸಾಂಕ್ರಾಮಿಕ ರೋಗ ಪ್ರಕರಣಗಳಿಗೆ ಸಂಬಂಧಿಸಿದಂತೆ ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡು ತುರ್ತು ಔಷದೋಪಚಾರಗಳನ್ನು ಒದಗಿಸಿ ಸಾಂಕ್ರಾಮಿಕ ರೋಗಗಳನ್ನು ನಿಯಂತ್ರಣ ಮಾಡಲಾಗುತ್ತಿದೆ.

**13) ಪರಿಷ್ಕೃತ ರಾಷ್ಟ್ರೀಯ ಕ್ಷಯರೋಗ ನಿಯಂತ್ರಣ ಕಾರ್ಯಕ್ರಮ ಜಿಲ್ಲಾ ಕ್ಷಯರೋಗ ನಿಯಂತ್ರಣ ಕೇಂದ್ರ, ಮಂಡ್ಯ ಜಿಲ್ಲೆ ಮಂಡ್ಯ.**

1) 24 ಮಾರ್ಚ್ 2001ರಿಂದ ಮಂಡ್ಯ ಜಿಲ್ಲೆಯಲ್ಲಿ **ಪರಿಷ್ಕೃತ ರಾಷ್ಟ್ರೀಯ ಕ್ಷಯರೋಗ ನಿಯಂತ್ರಣ ಕಾರ್ಯಕ್ರಮ (ಆರ್**.ಎನ್.ಟಿ.ಸಿ.ಪಿ.) ಕಾರ್ಯಕ್ರಮವನ್ನು ಜಾರಿಗೊಳಿಸಲಾಯಿತು. ಈ ಕಾರ್ಯಕ್ರಮದಡಿಯಲ್ಲಿ , ಎರಡು ವಾರದ ಮೇಲ್ಪಟ್ಟು ಕೆಮ್ಮು, ಸಂಜೆ ವೇಳೆಯ ಜ್ವರ, ತೂಕ ಕಡಿಮೆಯಾಗವುದು ಮತ್ತು ಕಫದಲ್ಲಿ ರಕ್ತ ಬಿಳುವುದು, ಈ ಯಾವುದಾದರು ಲಕ್ಷಣಗಳಿದ್ದ ರೋಗಿಗಳನ್ನು ಪತ್ತೆ ಹಚ್ಚಿ ಅವರುಗಳಿಗೆ ಎರಡು ಬಾರಿ ಕಫ ಪರೀಕ್ಷೆಮಾಡಿಸಿ, ಕಫದಲ್ಲಿ ಕ್ರಿಮಿಗಳಿದ್ದಲ್ಲಿ ಚಿಕಿತ್ಸೆಯನ್ನು ನೇರನಿಗಾವಣೆ (ಡಾಟ್ಸ್) ಮೂಲಕ ನೀಡಲು ಪ್ರಾರಂಭಿಸಲಾಯಿತು.
2) ಒಂದು ಲಕ್ಷ ಜನಸಂಖ್ಯೆಗೆ ಒಂದು ವರ್ಷದಲ್ಲಿ ಅಂದಾಜು 214 (ಶ್ವಾಸಕೋಶ ಕ್ಷಯ ಹಾಗೂ ಶ್ವಾಸಕೋಶೇತರ ಕ್ಷಯ) ಜನ ಕ್ಷಯರೋಗಿಗಳನ್ನು ಕಂಡ ಕಂಡು ಹಿಡಿಯುವುದು.
3) ಪತ್ತೆ ಹಚ್ಚಿದ ರೋಗಿಗಳಿಗೆ ಚಿಕಿತ್ಸೆ ಪ್ರಾರಂಭ ಮಾಡುವ ಮೊದಲು ಖಾಯಂ ವಿಳಾಸವನ್ನು ಪತ್ತೆ ಮಾಡಿ ಕನಿಷ್ಠ ಶೇಕಡಾ 95 ರೋಗಿಗಳಿಗೆ ಚಿಕಿತ್ಸೆ ಪ್ರಾರಂಭಿಸುವುದು. ಚಿಕಿತ್ಸೆ ವರ್ಗೀಕರಿಸಿ (ಕ್ಯಾಟ್ 1 ಮತ್ತು ಕ್ಯಾಟ್ 2) ರೋಗಿಗೆ ಹತ್ತಿರವಾದ ಅನುಕೂಲವಾದ ಸ್ಥಳದಲ್ಲಿ ಡಾಟ್ಸ್ (ನೇರನಿರ್ಗಾವಣೆ) ಮೂಲಕ ಔಷಧಿಯನ್ನು ನೀಡುವುದು.
4) ಕ್ಯಾಟ್ 1 ಕ್ಕೆ ತೀವ್ರ ರೋಗಿಗಳಿಗೆ ತೀವ್ರ ಚಿಕಿತ್ಸೆಯ ಹಂತ ಎರಡು ತಿಂಗಳು ಮತ್ತು ಮುಂದುವರೆದ ಚಿಕಿತ್ಸೆ ನಾಲ್ಕು ತಿಂಗಳು, ಕ್ಯಾಟ್ 2 ಕ್ಕೆ ತೀವ್ರ ಚಿಕಿತ್ಸೆಯ ಅಂತ ಮೂರು ತಿಂಗಳು ಮತ್ತು ಮುಂದುವರೆದು ಚಿಕಿತ್ಸೆ ಐದು ತಿಂಗಳು.
5) ರೋಗಿಗಳ ಮನೆಗೆ ಭೇಟಿ ನೀಡಿ ಚಿಕಿತ್ಸೆಯನ್ನು ಕ್ರಮವಾಗಿ ತೆಗೆದುಕೊಳ್ಳುವಂತೆ ಆರೋಗ್ಯ ಶಿಕ್ಷಣ ನೀಡುವುದು. ಚಿಕಿತ್ಸೆಯನ್ನು ರೋಗಿಯು ಯಾವುದೇ ಕಾರಣಕ್ಕೂ ನಿಲ್ಲಿಸದಂತೆ ಡಾಟ್ಸ್ ಕೇಂದ್ರದಲ್ಲಿ ತೆಗೆದುಕೊಳ್ಳುವುದು.
6) ಕಫದಲ್ಲಿ ಪತ್ತೆ ಮಾಡಿದ ಹೊಸ ಕ್ಷಯರೋಗಿಗಳಲ್ಲಿ ಕನಿಷ್ಠ 90% ರಷ್ಟು.ಗುಣಮಾಡುವುದು.
7) ಚಿಕಿತ್ಸೆ ಫಲಕಾರಿಯಾದಂತೆ ರೋಗಿಗಳ ಸಂಖ್ಯೆ ಕನಿಷ್ಠ 5% ರಷ್ಟು.
8) ಮರುಕಳಿಸಿದ ಸಂಖ್ಯೆ ಕನಿಷ್ಠ 5% ರಷ್ಟು.
9) ರೋಗದಿಂದ ಸಾವಿನ ಸಂಖ್ಯೆ ಕನಿಷ್ಠ 5% ರಷ್ಟು.
10) **ಎಂ.ಡಿ.ಆರ್. ರೋಗಿಗಳ ಶ್ರೀಘ್ರ ಪತ್ತೆಗಾಗಿ ಅಃಓಂಂಖ ಪ್ರಯೋಗಾಲಯವನ್ನು ಜಿಲ್ಲಾ ಮಿಮ್ಸ್ ಆಸ್ಪತ್ರೆ ಮತ್ತ ಉಪ ವಿಭಾಗಿಯ ಆಸ್ಪತ್ರೆ, ಪಾಂಡವಪುರ ಆಸ್ಪತ್ರೆಯಲ್ಲಿ ಪ್ರಾರಂಭಿಸಲಾಗಿದ್ದು ಇದರಿಂದ ಒಆಖ ರೋಗಿಗಳ ಶ್ರೀಘ್ರ ಪತ್ತೆ ಮತ್ತು ಚಿಕಿತ್ಸೆಗೆ ಅನುಕೂಲವಾಗಿರುತ್ತದೆ.**
11) **ಟಿ.ಬಿ. ನೋಟಿಫಿಕೇಷನ್ ಅಡಿಯಲ್ಲಿ ಈಗಾಗಲೇ ಖಾಸಗಿ ಸಂಸ್ಥೆಗಳಿಂದ ಪ್ರತಿ ಮಾಹೆ ವರದಿಗಳನ್ನು ತರಸಿಕೊಳ್ಳುತ್ತಿದ್ದು, ಈ ಬಗ್ಗೆ ಕೇಂದ್ರ ಸರ್ಕಾರ ಗೆಜೆಟ್ ನೋಟಿಫಿಕೇಷನ್ ಹೊರಡಿಸಿದ್ದು ಖಾಸಗಿ ಮೆಡಿಕಲ್ ಸ್ಟೋರ್ ಸಹಿತ ಪ್ರತಿ ಮಾಹೆ ವರದಿಯನ್ನು ಸಲ್ಲಿಸಬೇಕಾಗಿರುತ್ತದೆ.**
12) **ಟಿ.ಬಿ. ಚಿಕಿತ್ಸೆ ನೀಡುತ್ತಿರುವ ಕ್ಷಯರೋಗಿಗಳ ಬಗ್ಗೆ ಖಾಸಾಗಿ ವೈದ್ಯರು ಆರೋಗ್ಯ ಇಲಾಖೆಗೆ ಮಾಹಿತಿ ನೀಡದೇ ಇದ್ದರೆ ಅಂಥಹ ವೈದ್ಯರನ್ನು ಜೈಲಿಗೆ ಕಳುಹಿಸುವುದಕ್ಕೆ ಅವಕಾಶ ಇರುವ ಹೊಸ ಆದೇಶವನ್ನು ಕೇಂದ್ರ ಆರೋಗ್ಯ ಸಚಿವಾಲಯ ಹೊರಡಿಸಿದೆ. ಪ್ರಯೊಗಾಲಯದ ಮುಖ್ಯಸ್ಥರು ಮತ್ತು ಔಷಧ ಅಂಗಡಿಗಳ ಮಾಲೀಕರಿಗೂ ಇದು ಅನ್ವಯವಾಗುತ್ತದೆ.**

**ಕ್ಷಯ ರೋಗ ನಿಯಂತ್ರಣಕ್ಕೆ ಸರ್ಕಾರವು**

- **ಕ್ಷಯ ರೋಗ ಶಿಘ್ರಪತ್ತೆಗಾಗಿ ಜಿಲ್ಲೆಯಲ್ಲಿ 2 ಸಿ ಬಿ ನ್ಯಾಟ್ ಮಿಷನ್‌ಗಳ ಸ್ಥಾಪನೆ**

- **ಡ್ರಗ್ ರೆಸಿಟೆನ್ಸ್ ಟಿ ಬಿ ಸೆಂಟರ್‌ಗಳ ಸ್ಥಾಪನೆಗೆ ಕ್ರಮ**
- **ಎಲ್ಲಾ ಕ್ಷಯರೋಗಿಗಳಿಗೆ ಪ್ರತಿ ಮಾಹೆ ಮರು 500 ಪೌಷ್ಟಿಕ ಆಹಾರಕ್ಕಾಗಿ ಆರ್ಥಿಕ ಸಹಾಯ**
- **ಖಾಸಗಿ ವೈದರು, ಖಾಸಗಿ ಔಷದಿ ಮಳಿಗೆಗಳು ಮತ್ತು ಸ್ವಯಂ ಸೇವಾ ಸಂಸ್ಥೆಯವರು ಕ್ಷಯರೋಗಿಗಳ ಮಹಿತಿಯನ್ನು ಸಕಾರಕ್ಕೆ ನೀಡಿದರೆ ರೂ 500 ನ್ನು ಪ್ರೋತ್ಸಾಹ ಧನವನ್ನಾಗಿ ನೀಡಲಾಗುವುದು.**

**14) ತಾಲ್ಲೂಕು ಆರೋಗ್ಯಾಧಿಕಾರಿಗಳು:-**

ಮಂಡ್ಯ ಜಿಲ್ಲೆಯಲ್ಲಿ ಏಳು ತಾಲ್ಲೂಕುಗಳಿದ್ದು, 7 ತಾಲ್ಲೂಕು ಆರೋಗ್ಯಾಧಿಕಾರಿಗಳು ಇರುತ್ತಾರೆ. ಇವರು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಅಧೀನದಲ್ಲಿದ್ದು, ತಾಲ್ಲೂಕು ಆರೋಗ್ಯಾಧಿಕಾರಿಗಳು ತಾಲ್ಲೂಕಿನಲ್ಲಿರುವ ಎಲ್ಲಾ ಆಸ್ಪತ್ರೆಗಳ ಕಾರ್ಯನಿರ್ವಾಹಣೆ, ಮೇಲ್ವಿಚಾರಣೆ, ಸಿಬ್ಬಂದಿ ಕರ್ತವ್ಯದ ಮೇಲ್ವಿಚಾರಣೆ, ಕಾರ್ಯಕ್ರಮಗಳ ಪ್ರಗತಿ, ಉಸ್ತುವಾರಿ ರೋಗಗಳ ತಡೆಯುವ ಬಗ್ಗೆ ಕ್ರಮೋಪಾಯ ಕೈಗೊಳ್ಳುವುದು ಮುಂತಾದ ಕರ್ತವ್ಯ ನಿರ್ವಹಿಸುತ್ತಾರೆ.

**15) ಆರೋಗ್ಯ ರಕ್ಷಾ ಸಮಿತಿ ಬಗ್ಗೆ:-**

ಆರೋಗ್ಯ ರಕ್ಷಾ ಸಮಿತಿ ಪ್ರತಿ ತಾಲ್ಲೂಕಿಗೆ ಒಂದು ರಚನೆಯಾಗಿದ್ದು, ಅದರಲ್ಲಿ ಆ ತಾಲ್ಲೂಕಿಗೆ ಸಂಬಂಧಿಸಿದ ಆಸ್ಪತ್ರೆಗಳ ಅಭಿವೃದ್ಧಿ ನಿರ್ವಹಣೆ, ಮೇಲ್ವಿಚಾರಣೆ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತದೆ. ತಾಲ್ಲೂಕು ಆರೋಗ್ಯಾಧಿಕಾರಿಗಳು ಸದಸ್ಯ ಕಾರ್ಯದರ್ಶಿಗಳಾಗಿರುತ್ತಾರೆ.

**16) ಜಿಲ್ಲಾ ಮಟ್ಟದ ವ್ಯಾಪ್ತಿಗೆ ಒಳಪಡುವ ರಾಷ್ಟ್ರೀಯ ಕಾರ್ಯಕ್ರಮಗಳು:**

- ಸಂತಾನೋತ್ಪತ್ತಿ ಮತ್ತು ಮಕ್ಕಳ ಆರೋಗ್ಯ ಸೇವೆಗಳು.
- ಮಲೇರಿಯಾ ಮತ್ತು ಫೈಲೇರಿಯಾ ಡೆಂಗಿ ಮತ್ತು ಮೆದುಳು ಜ್ವರ ಕಾರ್ಯಕ್ರಮಗಳ ಸಾಂಕ್ರಾಮಿಕ ರೋಗ ನಿಯಂತ್ರಣ.
- ಕ್ಷಯರೋಗ ನಿಯಂತ್ರಣ.
- ಕುಷ್ಠರೋಗ ನಿರ್ಮೂಲನಾ ಕಾರ್ಯಕ್ರಮ/ಮಾನಸಧಾರ.
- ಏಡ್ಸ್ ಕಾರ್ಯಕ್ರಮಗಳು.
- ರಾಷ್ಟ್ರೀಯ ಅಯೋಡಿನ್ ಕೊರತೆ ಮತ್ತು ನ್ಯೂನತೆ ನಿಯಂತ್ರಣ.
- ಪೌಷ್ಠಿಕಾಂಶ.
- ಸಾಂಕ್ರಾಮಿಕ ರೋಗ ನಿಯಂತ್ರಣಾ.
- ಅಂಧತ್ವ ನಿವಾರಣೆ.
- ಗ್ಯಾಸ್ಟ್ರೋ ಎಂಟರ್‌ರೈಟೀಸ್.
- ಕ್ಯಾನ್ಸರ್.
- ಹಿಮೋ ಫಿಲಿಯಾ (ಕುಸುಮ ರೋಗ)
- ಕಾಲಕಾಲಕ್ಕೆ ತಲೆದೋರುವ ಇತರೇ ಮಾರಕ ರೋಗಗಳು.

ಸದರಿ ರೋಗಗಳ ನಿಯಂತ್ರಣ: ನಿರ್ಮೂಲನಾ ಚಿಕಿತ್ಸೆ ಇತ್ಯಾಧಿಗಳಿಗೆ ಮೇಲಿನ ಕಾರ್ಯಕ್ರಮಗಳು ತನ್ನದೇ ಆದ ರೂಪುರೇಖೆಗಳನ್ನು ಹೊಂದಿದ್ದು, ಇದಕ್ಕೆ ಸಂಬಂಧಪಟ್ಟಂತೆ ಇರುವ ವೈದ್ಯಕೀಯ ಅರೆವೈದ್ಯಕೀಯ:ತಾಂತ್ರಿಕಾ:ಅಧಿಕಾರಿಗಳು ಕಚೇರಿ ಸಿಬ್ಬಂದಿ ಕಾರ್ಯನಿರತರಾಗಿದ್ದಾರೆ. ಈ ಎಲ್ಲಾ ಕಾರ್ಯಕ್ರಮಗಳ

ಮೇಲ್ವಿಚಾರಣೆಯನ್ನು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು, ಜಿಲ್ಲಾ ಅನುಷ್ಠಾನಾಧಿಕಾರಿಗಳು, ಜಿಲ್ಲಾ ಶುಶ್ರೂಷಕರು, ಆರೋಗ್ಯ ಸಹಾಯಕರು ಮಾಡುತ್ತಾರೆ.

**17) ಕರ್ನಾಟಕ ಆರೋಗ್ಯ ಪದ್ಧತಿ ಅಭಿವೃದ್ಧಿ ಯೋಜನೆ (ಕೆ.ಹೆಚ್.ಎಸ್.ಡಿ.ಪಿ):**

ಇದಕ್ಕೆ ಪ್ರತ್ಯೇಕವಾಗಿ ಐಎಎಸ್ ಅಧಿಕಾರಿಗಳನ್ನು ಯೋಜನಾ ಆಡಳಿತಾಧಿಕಾರಿಗಳು ಹಾಗೂ ಸರ್ಕಾರದ ಪದ ನಿಮಿತ್ತ ವಿಶೇಷ ಕಾರ್ಯದರ್ಶಿಗಳು ಇದರ ಮುಖ್ಯಸ್ಥರಾಗಿದ್ದಾರೆ.

ವಿಶ್ವಬ್ಯಾಂಕ್ ನೆರವಿನ ಯೋಜನೆ ಅಡಿಯಲ್ಲಿ ಸದರಿ ಯೋಜನೆಯು ರಾಷ್ಟ್ರಮಟ್ಟದಲ್ಲಿ ಆಂಧ್ರಪ್ರದೇಶ, ಪಶ್ಚಿಮ ಬಂಗಾಳ ರಾಜ್ಯಗಳಲ್ಲಿ ಇರುವ ಯೋಜನೆಯ ಮಾದರಿಯಲ್ಲಿ ಕರ್ನಾಟಕ ರಾಜ್ಯದಲ್ಲಿಯೂ ಸಹ 1996 ರಲ್ಲಿ ಅಸ್ತಿತ್ವಕ್ಕೆ ಬಂದಿದೆ. ರಾಜ್ಯದಲ್ಲಿ ತಾಲ್ಲೂಕು ಮತ್ತು ಜಿಲ್ಲಾ ಮಟ್ಟದ ಆಸ್ಪತ್ರೆಗಳನ್ನು ಉನ್ನತೀಕರಿಸುವುದು:ವೈದ್ಯಕೀಯ ವ್ಯವಸ್ಥೆಯನ್ನು ಪುನರ್‌ಜೀವನ ಗೊಳಿಸಿವುದು: ಹೊಸ ಆಸ್ಪತ್ರೆ ಕಟ್ಟಡಗಳ ಕಾಮಗಾರಿ ಕೆಲಸವನ್ನು ಮಾಡಿಸುವುದು:ಆಸ್ಪತ್ರೆಗಳಿಗೆ ಸಲಕರಣೆ ಉಪಕರಣ ಪೀಠೋಪಕರಣ ಇತ್ಯಾಧಿಗಳನ್ನು ಪೂರೈಕೆ ಮಾಡುವುದು: ವೈದ್ಯಕೀಯ ಅರೇ-ವೈದ್ಯಕೀಯ ತಾಂತ್ರಿಕಾ ಇತ್ಯಾಧಿ ಹುದ್ದೆಗಳನ್ನು ಸೃಜಿಸುವುದು ವಿಶೇಷ ನೇಮಕಾತಿ ನಿಯಮಗಳು ರೂಪಿಸಿ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡುವ ಹಾಗೂ ವಿವಿಧ ಹಂತಗಳಲ್ಲಿ ತರಬೇತಿ ನೀಡುವ ಹಲವು ಇತ್ಯಾಧಿ ಆರೋಗ್ಯ ಕಾರ್ಯಕ್ರಮಗಳನ್ನು ಒಳಗೊಂಡಿದೆ.

**18) ಸಾಮಾನ್ಯ ವಿವರಗಳು:-**

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಯವರ ಕಚೇರಿಯು ಜಿಲ್ಲಾ ಮಟ್ಟದ ಕಚೇರಿಯಾಗಿದ್ದು, ಇದು ಮಂಡ್ಯ ನಗರದ ಎಂ.ಸಿ. ರಸ್ತೆ, ಜಿಲ್ಲಾ ಆಸ್ಪತ್ರೆ ಎದುರಿನಲ್ಲಿ ಕೆಲಸ ನಿರ್ವಹಿಸುತ್ತಿದೆ.

ಈ ಇಲಾಖೆಯು ಮುಖ್ಯವಾಗಿ ರೋಗಗಳು: ಸೋಂಕುಗಳು ಬಾರದೆ ಇರುವಂತೆ ತಡೆಯುವುದು. ಅಲ್ಲದೆ ನಿಯಂತ್ರಿಸುವುದರ ಜೊತೆಗೆ ಸಮುದಾಯದ ಆರೋಗ್ಯವನ್ನು ಕಾಪಾಡುವ ಮುಖ್ಯ ಉದ್ದೇಶ ಹೊಂದಿದೆ.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಚೇರಿಯಲ್ಲಿ ಪತ್ರಾಂಕಿತ ಸಹಾಯಕರು:ಕಚೇರಿ ಅಧೀಕ್ಷಕರು ಪ್ರಥಮ ದರ್ಜೆ ಸಹಾಯಕರು: ವಿವಿಧ ವೃಂದದ ವೈದ್ಯಕೀಯ ಅರೇ-ವೈದ್ಯಕೀಯ ತಾಂತ್ರಿಕಾ ಅರೇ ತಾಂತ್ರಿಕಾ ಗ್ರೂಪ್ ಡಿ ನೌಕರರು ಇತ್ಯಾಧಿ ನೌಕರರುಗಳು ನಿರ್ದಿಷ್ಟಪಡಿಸಿರುವ ವಿಭಾಗ ಸಂಕಲನಗಳಲ್ಲಿ ಸಂಬಂಧಪಟ್ಟ ಅಧಿಕಾರಿಗಳ ನಿಯಂತ್ರಣದಲ್ಲಿ ಕಚೇರಿ ನಿಯಾಮಾವಳಿ ರೀತ್ಯಾ ಕೆಲಸ ಮಾಡುತ್ತಿದ್ದಾರೆ

**19) ಸಾರ್ವಜನಿಕ ದೂರು ವಿಭಾಗ:-**

ಸಾರ್ವಜನಿಕ ದೂರು ವಿಭಾಗವು ಆದ್ಯತೆ ಮೇರೆಗೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ನಿಗಾವಣೆಯಲ್ಲಿದೆ.

ಸರ್ಕಾರದ ಅಧಿಸೂಚನೆ ಸಂಖ್ಯೆ: ಆಕುಕ/159/ಪಸ್ವೀರ್ 2002/ ದಿನಾಂಕ: 24-04-2003ರ ರೀತ್ಯಾ ಕರ್ನಾಟಕ ಮಾಹಿತಿ ಪಡೆಯುವ ಹಕ್ಕು ಅಧಿನಿಯಮ 2(ಎ) ಅಡಿಯಲ್ಲಿ ಆಡಳಿತಾತ್ಮಕ ಹಾಗೂ ಸೇವಾ ವಿಷಯಗಳಿಗೆ ಆಯಾ ಶಾಖೆಯ ಕೆಲವು ವಿಷಯಗಳಿಗೆ ಅನುಗುಣವಾಗಿ ರಾಜ್ಯ ಪತ್ರಾಂಕಿತ ಸಹಾಯಕರು ತಾಲ್ಲೂಕು ಆರೋಗ್ಯ ಅಧಿಕಾರಿ ಜಿಲ್ಲಾ ಮಲೇರಿಯಾ:ಕುಷ್ಟ ರೋಗ ನಿರ್ಮೂಲನಾಧಿಕಾರಿಗಳು

ಸಕ್ಷಮ ಪ್ರಾಧಿಕಾರಿಗಳನ್ನಾಗಿ ನೇಮಕ ಮಾಡಿದೆ, ಗುಂಪು ಎ.ಬಿ.ಸಿ. ಮತ್ತು ಡಿ ದರ್ಜೆ ಅಧಿಕಾರಿ,ಮತ್ತು ನೌಕರರ ಸೇವಾ ಹಾಗೂ ಶಿಸ್ತು ಕ್ರಮಗಳ ಬಗ್ಗೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರವರು ಮೇಲ್ಮನವಿ ಪ್ರಾಧಿಕಾರಿಗಳನ್ನಾಗಿ ನೇಮಿಸಿದೆ.

**20) <u>ಸಾರ್ವಜನಿಕ ಮಾಹಿತಿಗಾಗಿ ಸೌಲಭ್ಯಗಳು:-</u>**

ಮಾಹಿತಿ ಹಕ್ಕು ಅಧಿನಿಯಮ 2 (ಎ) ಮತ್ತು (ಬಿ) ರೀತ್ಯಾ ಇಲಾಖೆಗೆ ಸಂಬಂಧಿಸಿದಂತೆ ಜಿಲ್ಲೆಯ ಹಾಗೂ ತಾಲ್ಲೂಕಿನ ಕೇಂದ್ರಸ್ಥಾನಗಳಲ್ಲಿ ಇರುವ ಕಚೇರಿಗಳಲ್ಲಿ ವಿವರಗಳನ್ನು ಪ್ರಚುರಪಡಿಸಿ ಪ್ರಕಟಣೆ ಮಾಡುವಂತೆ ಸೂಚನೆ ನೀಡಲಾಗಿದೆ.

ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ಪ್ಲಾನ್ ಆಫ್ ಆಕ್ಷನ್ ಗುರಿ ಸಾಧನೆ: ಖರ್ಚು ಇತ್ಯಾಧಿ ಅಂಕಿ ಅಂಶಗಳು ಸಂಬಂಧಪಟ್ಟ ಕಾರ್ಯಕ್ರಮಾಧಿಕಾರಿಗಳಲ್ಲಿ ಲಭ್ಯವಿರುತ್ತದೆ.

ಜನಸಂಖ್ಯೆ ಸ್ಪೋಟ: ಜನನ ಪ್ರಮಾಣ ಸಾವಿನ ದರ, ಕಾರ್ಯಕ್ರಮಗಳ ವಿವರಗಳು, ಸಾಧಿಸಿರುವ ಗುರಿ, ಕುಟುಂಬ ಕಲ್ಯಾಣ ಯೋಜನೆಗಳು, ಪಲ್ಸ್ ಪೋಲಿಯೋ ಕಾರ್ಯಕ್ರಮದ ಅಂಕಿ-ಅಂಶಗಳು ಈ ಕಚೇರಿಯ ಡಿಎನ್ಎಸ್, ಎಎಸ್ಓ ವಿಭಾಗದಲ್ಲಿ ಲಭ್ಯವಿರುತ್ತದೆ.

ಮಾರಕ ರೋಗಗಳು: ಸೋಂಕಿನ ಹರಡುವಿಕೆ: ನಿಯಂತ್ರಣ , ಮುಂಜಾಗ್ರತೆ , ಚಿಕಿತ್ಸೆ , ಪರಿಣಾಮ ಪುನರ್ವಸತಿ, ಸಮಾಲೋಚನೆ ಇತ್ಯಾಧಿ ಅರಿವು ಮೂಡಿಸುವ ಮಾದ್ಯಮ ಸಂಪರ್ಕ ಸಾಧನಗಳು ಸಹ ಕಾರ್ಯಕ್ರಮಾಧಿಕಾರಿಗಳ ಕಚೇರಿಯಲ್ಲಿ ಲಭ್ಯವಿದ್ದು ಪಡೆಯಬಹುದಾಗಿದೆ.

26) ದೂರವಾಣಿ :- ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಯವರ ಕಚೇರಿಯಲ್ಲಿ ಇದ್ದು, ದೂರವಾಣಿ ಸಂಖ್ಯೆ 224027 ಆಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಇಲಾಖೆಯ ಸಂಬಂಧಪಟ್ಟ ಅಧಿಕಾರಿಗಳನ್ನು ಕೆಲಸದ ದಿನಗಳಲ್ಲಿ ನಿಗಧಿಪಡಿಸಿರುವ ಅವಧಿಯಲ್ಲಿ ಸಂಪರ್ಕಿಸಬಹುದಾಗಿದೆ. ಅಲ್ಲದೆ ಸಾರ್ವಜನಿಕರಿಗೆ ಯಾವುದೇ ಮಾಹಿತಿ ಬೇಕಾದಲ್ಲಿ ಇದರೊಂದಿಗೆ ಅಡಕಗೊಂಡಿರುವ ನಿಗದಿತ ನಮೂನೆ - 1 ರಲ್ಲಿ ಅರ್ಜಿ ಸಲ್ಲಿಸಿ ನಿಗದಿಪಡಿಸಿರುವಷ್ಟು ಶುಲ್ಕವನ್ನು ಪಾವತಿಸಬೇಕಾಗುತ್ತದೆ.

ಕಚೇರಿಯ ಕಾರ್ಯವಿಧಾನದ ವಿವರಗಳು, ಈ ರೀತಿ ಇರುತ್ತವೆ. ಹೊರಗಿನಿಂದ ಈ ಕಚೇರಿ ಬಂದ ಪತ್ರವನ್ನು ಕಚೇರಿ ಅಧೀಕ್ಷಕರು, ಸಹಾಯಕ ಆಡಳಿತಾಧಿಕಾರಿಗಳು ಹಾಗೂ ಕಚೇರಿಯ ಮುಖ್ಯಸ್ಥರಾದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು ನೋಡಿ ಸಹಿ ಮಾಡಿದ ನಂತರ ಈ ಕಚೇರಿಯ ಯಾವ ವಿಭಾಗಕ್ಕೆ ಸೇರಿದ್ದು ಎಂದು ಗುರುತಿಸಿದ ನಂತರ ಇಂದ ವಿಭಾಗಕ್ಕೆ ನೀಡಲಾಗುತ್ತದೆ. ಯಿಂದ ವಿಭಾಗದಲ್ಲಿ ರಿಜಿಸ್ಟರ್‌ಗೆ ನೋಂದಾಯಿಸಿಕೊಂಡು ನಂತರ ಸಂಬಂಧಪಟ್ಟ ವಿಷಯ ನಿರ್ವಾಹಕರಿಗೆ ನೀಡಲಾಗುತ್ತದೆ. ವಿಷಯ ನಿರ್ವಾಹಕರು ತಾವು ನಿರ್ವಹಿಸುವ ವಿಷಯ ವಹಿಗೆ ನೊಂದಾಯಿಸುತ್ತಾರೆ ಹೊಸಾ ವಿಷಯವಾದರೆ ಹೊಸ ಕಡತವನ್ನು ತೆರೆದು ಕಚೇರಿ ಟಿಪ್ಪಣಿಯಲ್ಲಿ ಪತ್ರದಲ್ಲಿರುವ ವಿಷಯವನ್ನು ಸಂಕ್ಷಿಪ್ತವಾಗಿ ಮಂಡಿಸಿ ಮುಂದಿನ ಆದೇಶಕ್ಕಾಗಿ ಕಚೇರಿ ಅಧೀಕ್ಷಕರಿಗೆ ನೀಡುತ್ತಾರೆ. ಕಚೇರಿ ಅಧೀಕ್ಷಕರು ತಮ್ಮ ಅಭಿಪ್ರಾಯದೊಡನೆ ಕಡತವನ್ನು ಸಹಾಯಕ ಆಡಳಿತಾಧಿಕಾರಿಗಳಿಗೆ ನೀಡುತ್ತಾರೆ . ಅದೇ ರೀತಿ ಸಹಾಯಕ ಆಡಳಿತಾಧಿಕಾರಿಗಳು ತಮ್ಮ ಅಭಿಪ್ರಾಯದೊಡನೆ ಕಚೇರಿಯ ಮುಖ್ಯಸ್ಥರಾದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ರವರಿಗೆ ಕಳುಹಿಸಿಕೊಡುತ್ತಾರೆ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು ರವರು ಅಂತಿಮವಾಗಿ ಮಾಡಿದ ಆದೇಶದ ಪ್ರಕಾರ ಕ್ರಮಕೈಗೊಳ್ಳಲಾಗತ್ತದೆ. ಒಂದು ವೇಳೆ ಈ ಕಛೇರಿಯ ಅಧಿಕಾರ ವ್ಯಾಪ್ತಿಗೆ ಮೀರಿದ್ದರೆ ಜಿಲ್ಲಾ ಪಂಚಾಯತ್ ಅಥವಾ ನಿರ್ದೇಶನಾಲಯಕ್ಕೆ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿಕೊಡಲಾಗುತ್ತದೆ.

ಮೇಲ್ವಿಚಾರಣೆ ಮತ್ತು ಹೊಣೆಗಾರಿಕೆಯನ್ನು ನಿರ್ವಹಿಸುವ ಸಂದರ್ಭದಲ್ಲಿ ಕೆ.ಸಿ.ಎಸ್.ಆರ್., ಕೆ.ಎಫ್.ಸಿ. ನಿಯಮಗಳು, ಸರ್ಕಾರಿ ಆದೇಶಗಳು, ಪೂರ್ವ ದೃಷ್ಟಾಂತಗಳ ಆಧಾರದ ಮೇಲೆ ತೀರ್ಮಾನಕ್ಕೆ ಬರಲಾಗುತ್ತದೆ.

ಕಚೇರಿಗಳಲ್ಲಿ ಕಡತಗಳನ್ನು ಐದು ಕಟ್ಟು ನಿಯಮಕ್ಕನುಸಾರವಾಗಿ ನಿರ್ವಹಿಸಲಾಗುತ್ತದೆ.

1) ಅನಿರ್ಧಿಷ್ಟ ಕಾಲದವರೆಗೆ ಕಾಪಾಡಬೇಕಾದ ದಾಖಲೆಗಳು - ರೆಕಾರ್ಡ್ ವಹಿ ಸೇವಾ ಪುಸ್ತಕಗಳು.
2) 30 ವರ್ಷಗಳವರೆಗೆ ಕಾಯ್ದಿಡುವ ಕಡತಗಳು.
3) 10 ವರ್ಷಗಳವರೆಗೆ ಕಾಯ್ದಿಡುವ ಕಡತಗಳು - ವಿಶಿಷ್ಠ ವಹಿ, ವಿಷಯ ವಹಿ, ಕರೆ ಪುಸ್ತಕ, ವೈಯಕ್ತಿಕ ವಹಿ,
4) 5 ವರ್ಷಗಳವರೆಗೆ ಕಾಯ್ದಿಡುವ ಕಡತಗಳು ರವಾನೆ ವಹಿ, ಸ್ಟ್ಯಾಂಪ್ ವಹಿ, ಸ್ಥಳೀಯ ಬಟವಾಡೆ ವಹಿ, ರೆಕಾರ್ಡ್ ನೀಡಿಕೆ ವಹಿ, ಗ್ರಂಥಾಲಯ ಪುಸ್ತಕ ನೀಡಿಕೆ ವಹಿ,

5) 1 ವರ್ಷದವರೆಗೆ ಕಾಯ್ದಿಡುವ ಕಡತಗಳು ನಿಯತಕಾಲಿಕೆ ವಹಿ, ಮಾಸಿಕ ಬಾಕಿ ವಿಷಯ ವಹಿ, ಕಾಗದ ಪತ್ರಗಳ ಸಾಪ್ತಾಹಿಕ ಬಾಕಿ ವಿತರಣಾ ವಹಿ, ಶುದ್ದ ಪ್ರತಿ, ಹಾಜರಿ ಪುಸ್ತಕ ಇತ್ಯಾಧಿ.

ಪ್ರಾಥಮಿಕ ಆರೋಗ್ಯ ಕೇಂದ್ರ , ಸಮುದಾಯ ಆರೋಗ್ಯ ಕೇಂದ್ರ ಹಾಗೂ ಸಾರ್ವಜನಿಕ ಆಸ್ಪತ್ರೆಗಳ ಮಟ್ಟದಲ್ಲಿ ಆರೋಗ್ಯ ರಕ್ಷಾ ಸಮಿತಿಗಳನ್ನು ರಚಿಸಲಾಗಿದೆ. ರಕ್ಷಾ ಸಮಿತಿಗಳಲ್ಲಿ ಅಧಿಕಾರೇತರ ಸದಸ್ಯರುಗಳು ಮತ್ತು ಚುನಾಯಿತ ಪ್ರತಿನಿಧಿಗಳು ಇರುತ್ತಾರೆ. ಸದರಿ ಸಮಿತಿಗಳು ಆಸ್ಪತ್ರೆಗಳ ಬಳಕೆದಾರರ ನಿಧಿಯ ಖರ್ಚು- ವೆಚ್ಚದ ಬಗ್ಗೆ ಮತ್ತು ಆಸ್ಪತ್ರೆಗಳ ಅಭಿವೃದ್ಧಿಯ ಬಗ್ಗೆ ಕಾರ್ಯ ಯೋಜನೆ ಅನುಷ್ಠಾನಗೊಳಿಸಲು, ಸಲಹೆ - ಸೂಚನೆ ನೀಡಲು ಅಧಿಕಾರ ಹೊಂದಿರುತ್ತಾರೆ.

ಕಚೇರಿಯ ಅಧಿಕಾರಿಗಳ ಮತ್ತು ನೌಕರರ ವಿವರ ಡಿಸೆಂಬರ್ 2017 ರಂತೆ ಈ ಕೆಳಗಿನಂತಿವೆ.

| ಕ್ರ.ಸಂ | ಅಧಿಕಾರಿ/ ಸಿಬ್ಬಂದಿ ಹೆಸರು | ಪದನಾಮ | ವೇತನ ಶ್ರೇಣಿ |
|---|---|---|---|
| 1 | ಡಾ|| ಮೋಹನ್ | ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು | 30400-51300 |
| 2 | ಡಾ|| ಜಿ.ಸಿ.ಬೆಟ್ಟಸ್ವಾಮಿ | ಆರ್.ಸಿ.ಹೆಚ್.ಅಧಿಕಾರಿಗಳು | 30400-51300 |
| 3 | ಡಾ|| ಕೆ.ಆರ್.ಶಶಿಧರ್ | ಜಿಲ್ಲಾ ಕುಟುಂಬ ಕಲ್ಯಾಣಾಧಿಕಾರಿ | 28100-50100 |
| 4 | ಪಿ.ಶಿವಾನಂದ್ | ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ | 24000-45300 |
| 5 | ಬಿ.ಸಾವಿತ್ರಮ್ಮ | ಸಹಾಯಕ ಆಡಳಿತಾಧಿಕಾರಿಗಳು | 21600-40050 |
| 6 | ಸುರೇಶ್ ಬಾಬು | ಕಚೇರಿ ಅಧೀಕ್ಷಕರು | 20000-36300 |
| 7 | ಶೇಷಮ್ಮ. | ಕಚೇರಿ ಅಧೀಕ್ಷಕರು | 20000-36300 |
| 8 | ಜಿ.ಎನ್ ಸುರೇಶ್ | ಪ್ರ.ದ.ಸಹಾಯಕರು | 16000-29600 |
| 9 | ಎನ್.ಪ್ರಕಾಶ್ | ಪ್ರ.ದ.ಸಹಾಯಕರು | 14550-26700 |
| 10 | ಶ್ರೀನಿವಾಸಗೌಡ ಆರ್.ಕೆ.. | ಪ್ರ.ದ.ಸಹಾಯಕರು | 14550-26700 |
| 11 | ಜಿ.ಸಿ.ವಿಶ್ವನಾಥ್. | ಪ್ರ.ದ.ಸಹಾಯಕರು | 14550-26700 |
| 12 | ಆರ್.ಮೂಡಲಗಿರಿ | ಪ್ರ.ದ.ಸಹಾಯಕರು | 14550-26700 |
| 13 | ಅಂಜನಪ್ಪ. | ಪ್ರ.ದ.ಸಹಾಯಕರು | 14550-26700 |
| 14 | ಚಂದ್ರಮ್ಮ | ಜಿಲ್ಲಾ ಶುಶ್ರೂಷಕ ಅಧಿಕಾರಿ | 16000-29600 |
| 15 | ಪುಟ್ಟಲಕ್ಷೀ | ದ್ವಿ.ದ. ಸಹಾಯಕರು | 12500-24000 |
| 16 | ಡಿ.ಸುಮಿತ್ರಾದೇವಿ | ದ್ವಿ.ದ. ಸಹಾಯಕರು | 14550-26700 |
| 17 | ಆಯಿಷಾ | ದ್ವಿ.ದ.ಸಹಾಯಕರು | 11600-21000 |
| 18 | ಎಂ.ಎಂ.ತ್ರಿವೇಣಿ | ಸಹಾಯಕ ಸಾಂಖ್ಯಿಕ ಅಧಿಕಾರಿ | 20000-36300 |
| 19 | ಪುಟ್ಟರಾಜು | ಸಹಾಯಕ ಸಾಂಖ್ಯಿಕ ಅಧಿಕಾರಿ | 20000-36300 |
| 20 | ಚಂದ್ರಕಲಾ | ಶುಶ್ರೂಷಕದಾದಿ | 17650-32000 |
| 21 | ಪದ್ಮ | ಶುಶ್ರೂಷಕದಾದಿ | 17650-32000 |
| 22 | ಜಿ.ಕೇಶವ | ಕಿ.ಪು.ಆ.ಸಹಾಯಕ | 12500-24000 |
| 23 | ಎಂ.ಎನ್.ಕೃಷ್ಣ ಭಾರತಿ | ಕಿ.ಪು.ಆ.ಸಹಾಯಕ | 13600-26000 |
| 24 | ರಾಘವೇಂದ್ರ ಎಲ್ | ಕಿ.ಪು.ಆ.ಸಹಾಯಕ | 12500-24000 |
| 25 | ಆನಂದ | ವಾಹನ ಚಾಲಕರು | 14550-26700 |
| 26 | ವೆಂಕಟೇಶ್ | ವಾಹನ ಚಾಲಕರು | 11600-21000 |
| 27 | ಲ್ಯಾವಲಿನ್ ಸಂತೋಷ್ ಕುಮಾರ್ | ವಾಹನ ಚಾಲಕರು | 11600-21000 |
| 28 | ಕೃಷ್ಣ | ವಾಹನ ಚಾಲಕರು | 11600-21000 |
| 29 | ರಾಘವೇಂದ್ರ | ವಾಹನ ಚಾಲಕರು | 11600*21000 |
| 30 | ಎಂ.ಮಹದೇವ್ | ಸ್ಕಿಲ್ಡ್ ಅಸಿಸ್ಟಂಟ್ | 11600-21000 |
| 31 | ಸಿ.ನಾಗರತ್ನ | ಅಕ್ಷರಸ್ಥ ಸಹಾಯಕರು | 11000-19000 |
| 32 | ಎನ್.ದೊರೆಸ್ವಾಮಿ | ಗ್ರೂಪ್ ಡಿ ನೌಕರರು | 10400-16400 |
| 33 | ಸುಗುಣರಾಜು | ಗ್ರೂಪ್ ಡಿ ನೌಕರರು | 11000-19000 |
| 34 | ಪುಟ್ಟೀರ | ಗ್ರೂಪ್ ಡಿ ನೌಕರರು | 11000-19000 |
| 35 | ನಾಗರಾಜು | ಗ್ರೂಪ್ ಡಿ ನೌಕರರು | 11000-19000 |
| 36 | ಹೆಚ್.ಬಿ.ಚಂದ್ರಶೇಖರ್ | ಗ್ರೂಪ್ ಡಿ ನೌಕರರು | 11000-19000 |
| 37 | ಕೆ.ವೆಂಕಟೇಶ್ | ಗ್ರೂಪ್ ಡಿ ನೌಕರರು | 10400-16400 |
| 38 | ಟಿ.ಲಿಂಗಯ್ಯ | ಗ್ರೂಪ್ ಡಿ ನೌಕರರು | 11000-19000 |
| 39 | ಎಸ್.ಗೋಪಿ | ಗ್ರೂಪ್ ಡಿ ನೌಕರರು | 11000-19000 |

ಜಿಲ್ಲಾ ಆರೋಗ್ಯ ಮತ್ತು ಕುಟುಂಬ
ಕಲ್ಯಾಣಾಧಿಕಾರಿಗಳು, ಮಂಡ್ಯ.